THE NEW
INDIAN EXPRESS
BENGALURU • FRIDAY • JANUARY 06, 2023 • ₹9.00 • PAGES 44 • LATE CITY EDITION

BEIJING HOSP RUNS OUT OF BEDS AS COVID BRINGS MORE SICK

Beijing: Patients, most of them elderly, are lying on stretchers in hallways on oxygen support while sitting in wheelchairs as Covid-19 surges in China's capital Beijing. The Chuiyangliu Hospital in the city's east was packed with newly arrived patients on Thursday. The surge in severely ill people needing hospital care follows China abandonment of its most severe pandemic restrictions last month.

ಮಹದಾಯಿ ಯೋಜನೆ ಅನುಷ್ಠಾನ

ಕಾಂಗ್ರೆಸ್ ಪಕ್ಷದ ಸುಳ್ಳಿನ ಕಂತೆಯ ಅನಾವರಣ

ಭಾರತೀಯ ಜನತಾ ಪಕ್ಷದ
ಬದ್ಧತೆಯ ಸತ್ಯದರ್ಶನ

ಮಹದಾಯಿ ಯೋಜನೆಯ ಪ್ರತಿ ಹಂತದಲ್ಲೂ ಇಚ್ಛಾಶಕ್ತಿ
ಹಾಗೂ ಬದ್ಧತೆಯನ್ನು ಮೆರೆದ ಪಕ್ಷ ಬಿಜೆಪಿ

- ಮಹದಾಯಿ ಕಣಿವೆ ಅಡಿಯಲ್ಲಿ 1980ರಲ್ಲಿ ಸುಮಾರು 30 ಟಿಎಂಸಿ ನೀರಿನ ಬಳಕೆಗೆ ರಾಜ್ಯವು ಯೋಜನೆಯೊಂದನ್ನು ರೂಪಿಸಿತ್ತು.
- 16.03.1989ರಂದು ರಾಜ್ಯದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಆರ್. ಬೊಮ್ಮಾಯಿರವರು ಗೋವಾ ರಾಜ್ಯದ ಮುಖ್ಯಮಂತ್ರಿಯವರೊಂದಿಗೆ ಸಭೆಯನ್ನು ನಡೆಸಿ ಈ ಯೋಜನೆ ಕುರಿತು ಪ್ರಸ್ತಾಪಿಸಿದರು. ಇದಕ್ಕೆ ಗೋವಾ ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಿತ್ತು.
- 09.10.2006ರಲ್ಲಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅರಣ್ಯೇತರ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದ್ದು ಭಾರತೀಯ ಜನತಾ ಪಕ್ಷದ ಸಾಧನೆ.

- 2006ರಲ್ಲಿ ಗೋವಾ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ ಕಳಸಾ ಸಂಪರ್ಕ ಕಾಲುವೆ ನಿರ್ಮಾಣ ಕಾಮಗಾರಿಗಳನ್ನು ತಡೆಯಲು ಪ್ರಯತ್ನಿಸಿದರೂ ಸಹ, ರಾಜ್ಯ ಸರ್ಕಾರವು ಇಚ್ಛಾಶಕ್ತಿಯನ್ನು ಪ್ರದರ್ಶಿಸಿ ತಡೆಯಾಜ್ಞೆ ದೊರೆಯದಂತೆ ನೋಡಿಕೊಂಡಿತು.
- ಗೋವಾ ಸರ್ಕಾರ ಸರ್ಕಾರೇತರ ಸಂಸ್ಥೆಗಳನ್ನು ಬಳಸಿಕೊಂಡು ಪರಿಸರ ತೀರುವಳಿ ನೆಪದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಅನೇಕ ಅರ್ಜಿಗಳನ್ನು ಸಲ್ಲಿಸಿ ಸಂಪರ್ಕ ಕಾಲುವೆಯ ಕಾಮಗಾರಿಗೆ ತಡೆ ಒಡ್ಡಿತು. ಆದರೆ ಇದ್ಯಾವುದನ್ನೂ ಲೆಕ್ಕಿಸದೆ ಅಂದಿನ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಹಾಗೂ ಜಲಸಂಪನ್ಮೂಲ ಸಚಿವ ಶ್ರೀ ಬಸವರಾಜ ಬೊಮ್ಮಾಯಿರವರು ಎಲ್ಲಾ ಅರ್ಜಿಗಳ ವಿಲೇವಾರಿಗೆ ಸಕಾರಾತ್ಮಕ ಕ್ರಮ ವಹಿಸಿದರು.
- 2014ರಲ್ಲಿ ಶ್ರೀ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ನ್ಯಾಯಾಧಿಕರಣಕ್ಕೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿ ನ್ಯಾಯಾಧಿಕರಣದ ವರದಿಯು ನಿಗದಿತ ಕಾಲಾವಧಿಯಲ್ಲಿ ಪ್ರಕಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು.
- ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಮಹದಾಯಿ ಕಣಿವೆಯಲ್ಲಿ 200 ಟಿಎಂಸಿ ನೀರು ಬಳಕೆಗೆ ಲಭ್ಯವಿದೆ ಎಂದು ಕೇಂದ್ರ ಜಲ ಆಯೋಗ ವರದಿಯಲ್ಲಿ ತಿಳಿಸಿತು. ಆದರೆ ಗೋವಾ ಸರ್ಕಾರ ನೀರಿನ ಲಭ್ಯತೆ ಅತೀ ಕಡಿಮೆ ಇದೆ ಎಂದು ಪ್ರತಿಪಾದಿಸಿತು. ಅತ್ಯಂತ ಪ್ರತಿರೋಧದ ನಡುವೆಯು ಎನ್‌ಡಿಎ ಸರ್ಕಾರದ ಅವಧಿಯಲ್ಲಿ, ನೀಡಿದ ವರದಿಯನ್ವಾಧರಿಸಿ ನೀರಿನ ಲಭ್ಯತೆ 188 ಟಿಎಂಸಿ ಇದೆಯೆಂದು ನ್ಯಾಯಾಧಿಕರಣವು ತೀರ್ಪಿನಲ್ಲಿ ಅಧಿಕೃತಗೊಳಿಸಿತು. ಇದು ಎನ್‌ಡಿಎ ಸರ್ಕಾರದ ಕಾಳಜಿಯನ್ನು ಎತ್ತಿ ಹಿಡಿಯುತ್ತದೆ.
- ಆಗಸ್ಟ್ 2018ರಲ್ಲಿ ಮಹದಾಯಿ ನ್ಯಾಯಾಧಿಕರಣದ ಅಂತಿಮ ತೀರ್ಪು ಪ್ರಕಟಣೆಯಾಯಿತು. 2019ರಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರ ವಹಿಸಿಕೊಂಡಿತು. ಸತತ ಪ್ರಯತ್ನ ಹಾಗೂ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಮುತ್ಸದ್ದಿತನದ ಕ್ರಮಗಳ ಫಲವಾಗಿ ಅತ್ಯಂತ ಕಡಿಮೆ ಅವಧಿಯಲ್ಲಿಯೇ ಐ-ತೀರ್ಪಿನ ಗೆಜೆಟ್ ಪ್ರಕಟಣೆಗೊಳಿಸುವಲ್ಲಿ ಇತಿಹಾಸ ನಿರ್ಮಿಸಲಾಯಿತು. ಇದು ಶ್ರೀ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಹಾಗೂ ರಾಜ್ಯದ ಭಾರತೀಯ ಜನತಾ ಪಕ್ಷದ ಸರ್ಕಾರದ ಮಹತ್ತರ ಸಾಧನೆ ಹಾಗೂ ಕೊಡುಗೆಯಾಗಿರುತ್ತದೆ.
- ಗೆಜೆಟ್ ಪ್ರಕಟಣೆ ನಂತರದಲ್ಲಿ ಯಾವುದೇ ವಿಳಂಬ ಮಾಡದೇ ಭಾರತೀಯ ಜನತಾ ಪಕ್ಷದ ಸರ್ಕಾರ 10.07.2020 ರಂದು ಕಳಸಾ ನಾಲಾ ತಿರುವು ಯೋಜನೆಗೆ ರೂ.885.80 ಕೋಟಿ ಮತ್ತು ಬಂಡೂರಿ ನಾಲಾ ತಿರುವು ಯೋಜನೆಗೆ ರೂ.791.50 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ತನ್ನ ಬದ್ಧತೆಯನ್ನು ತೋರಿರುತ್ತದೆ.
- ಬಿಜೆಪಿ ಸರ್ಕಾರವು ಈ ಯೋಜನೆಗಳ ಪೂರ್ವ ಕಾರ್ಯಸಾಧ್ಯತಾ ವರದಿಗಳನ್ನು (Pre-feasibility Report) ಕೇಂದ್ರ ಜಲಆಯೋಗಕ್ಕೆ ಸಲ್ಲಿಸುವಲ್ಲಿ ಮತ್ತು ನವೆಂಬರ್ 2022ರಲ್ಲಿ ಅಗತ್ಯ ತೀರುವಳಿ ಪಡೆಯುವಲ್ಲಿ ತನ್ನ ಬದ್ಧತೆಯನ್ನು ತೋರಿರುತ್ತದೆ.

ಕೇಂದ್ರ ಜಲ ಆಯೋಗದಿಂದ 29.12.2022ರ ಅಧಿಕೃತ ಪತ್ರದಲ್ಲಿ ಕಳಸಾ ಹಾಗೂ ಬಂಡೂರಿ ನಾಲಾ ತಿರುವು ಯೋಜನೆಗಳ DPR (Lift Schemes) ಗಳಿಗೆ ಅಗತ್ಯ ತೀರುವಳಿಗಳನ್ನು ಅತ್ಯಲ್ಪ ಅವಧಿಯಲ್ಲಿ ಪಡೆಯುವ ಮೂಲಕ ರಾಜ್ಯ ಬಿಜೆಪಿ ಸರ್ಕಾರ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದೆ.

ಮಹದಾಯಿ ಯೋಜನೆಗೆ ಶೀಘ್ರದಲ್ಲಿಯೇ ಚಾಲನೆ ನೀಡಲು ರಾಜ್ಯದ ಬಿಜೆಪಿ ಸರ್ಕಾರವು ಕಟಿಬದ್ಧವಾಗಿದೆ.

ಮಹದಾಯಿ ಯೋಜನೆಯ ಅನುಷ್ಠಾನದಲ್ಲಿ ಪದೇ ಪದೇ ಎಡವಟ್ಟುಗಳನ್ನು ಮಾಡಿರುವ ಕಾಂಗ್ರೆಸ್ ಪಕ್ಷಕ್ಕೆ ಬಿಜೆಪಿಯ ಬದ್ಧತೆಯನ್ನು ಪ್ರಶ್ನಿಸುವ ಯಾವುದೇ ನೈತಿಕ ಹಕ್ಕಿಲ್ಲ.

- 2000ದಲ್ಲಿ ಮಹದಾಯಿ ಯೋಜನೆಯಡಿ ಕುಡಿಯುವ ನೀರಿನ ಬಳಕೆಯ ಪ್ರಮಾಣವನ್ನು 7.56 ಟಿಎಂಸಿಗೆ ಕಡಿತಗೊಳಿಸಿದ್ದು ಅಂದಿನ ಕಾಂಗ್ರೆಸ್ ಸರ್ಕಾರ.
- 30.04.2002ರಲ್ಲಿ ಕೇಂದ್ರ ಜಲ ಆಯೋಗದಿಂದ ಕಳಸಾ-ಬಂಡೂರಿ ತಿರುವು ಯೋಜನೆಗೆ ಅನುಮೋದನೆ ದೊರಕಿದರೂ ಸಹ, ಕೂಡಲೇ ಯೋಜನೆಗಳಿಗೆ ಅಗತ್ಯ ತೀರುವಳಿ ಪಡೆಯಲು ಯಾವುದೇ ಕ್ರಮ ತೆಗೆದುಕೊಳ್ಳದೇ ಕಾಂಗ್ರೆಸ್ ಸರ್ಕಾರ 5 ತಿಂಗಳು ಕಾಲಹರಣ ಮಾಡಿತು.
- 27-03-2007ರಂದು ಅಂದಿನ ಯುಪಿಎ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿರವರು ಗೋವಾ ರಾಜ್ಯದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮಹದಾಯಿ ಕಣಿವೆಯಿಂದ ಒಂದು ಹನಿ ನೀರನ್ನು ಕರ್ನಾಟಕಕ್ಕೆ ನೀಡುವುದಿಲ್ಲವೆಂದು ಸಾರ್ವಜನಿಕ ಸಮಾರಂಭದಲ್ಲಿ ಘೋಷಿಸಿದರು. ಕರ್ನಾಟಕದ ಯಾವುದೇ ಕಾಂಗ್ರೆಸ್ ನಾಯಕರಿಗೆ ಇದನ್ನು ವಿರೋಧಿಸುವ ತಾಕತ್ತಿರಲಿಲ್ಲ.
- 2010ರಲ್ಲಿ ಯುಪಿಎ ಸರ್ಕಾರವು ಕರ್ನಾಟಕದ ಇಚ್ಛೆಯ ವಿರುದ್ಧವಾಗಿ ಮಹದಾಯಿ ನ್ಯಾಯಾಧಿಕರಣ ರಚಿಸಿ, ಯಾವುದೇ ಸೌಲಭ್ಯಗಳನ್ನು ಒದಗಿಸದೇ, ಕಛೇರಿಗೆ ಸ್ಥಳಾವಕಾಶವನ್ನೂ ನೀಡದೇ ವಿವಾದ ಇತ್ಯರ್ಥವಾಗಲು 2 ವರ್ಷಕ್ಕೂ ಅಧಿಕ ಅವಧಿಯ ಕಾಲಹರಣಕ್ಕೆ ಕಾರಣವಾಯಿತು.
- 2017ರಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಕಳಸಾ-ಬಂಡೂರಿ ಹೋರಾಟಗಾರರ ಮೇಲೆ ಹೆಣ್ಣು-ಗಂಡು ಎಂದು ಲೆಕ್ಕಿಸದೆ ಲಾಠಿ ಪ್ರಹಾರ ನಡೆಸಿದ್ದನ್ನು ಜನರು ಮರೆತಿಲ್ಲ.
- ಅಂದಿನ ರಾಜ್ಯ ಕಾಂಗ್ರೆಸ್ ಸರ್ಕಾರದ ತಪ್ಪು ನಿಲುವಿನಿಂದಾಗಿ ಬಿಜೆಪಿಯ ಅಧಿಕಾರಾವಧಿಯಲ್ಲಿ ಪ್ರಾರಂಭಿಸಿ ನಿರ್ಮಿಸಿದ್ದ ಮಹದಾಯಿ-ಮಲಪ್ರಭಾ ಸಂಪರ್ಕ ಕಾಲುವೆಗೆ ತಡೆಗೋಡೆ ಕಟ್ಟಿದ್ದೇ ಕಾಂಗ್ರೆಸ್ ಸರ್ಕಾರದ ಸಾಧನೆ.





ಬಿಜೆಪಿ-ಕರ್ನಾಟಕ